5. ಸಚಿವರ ಹೇಳಿಕೆ

ವಿಷಯ :- ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ತುಂಗಭದ್ರಾ ನದಿಗೆ ಆನೆಗೊಂದಿ ಹತ್ತಿರ ತೂಗುಸೇತುವೆ ನಿರ್ಮಾಣ ಕಾಮಗಾರಿಯ ಕುರಿತು :

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ತುಂಗಭದ್ರಾ ನದಿಗೆ ಆನೆಗೊಂದಿ ಹತ್ತಿರ ತೂಗುಸೇತುವೆ ನಿರ್ಮಾಣ ಕಾಮಗಾರಿಯ ಕುರಿತು, ಸೇತುವೆಯ ಒಟ್ಟು ಉದ್ದ 16 ಮೀಟರ್, ಪೈಲಾನ್‌ಗಳ ನಡುವಿನ ಉದ್ದ 80 ಮೀಟರ್, ಸೇತುವೆಯ ಶಂಕುಸ್ಥಾಪನೆ 1993, ಆರ್‌ಐಡಿಎಫ್-2ರಲ್ಲಿ ಅನುಮೋದನೆ 4.4.1997, ಕಾಮಗಾರಿ ಪ್ರಾರಂಭವಾಗಿದ್ದು ದಿನಾಂಕ 15.4.1997, ಗುತ್ತಿಗೆದಾರರು ಶ್ರೀ ಬಿ.ವಿ. ಸುಬ್ಬಾರೆಡ್ಡಿ, ದಿನಾಂಕ 22-5-2000ದಂದು ಯುನೆಸ್ಕೋರವರು ಹಂಪಿಯನ್ನು ವಿಶ್ವ ಪರಂಪರೆ ಪಟ್ಟಿಯಿಂದ ಕೈಬಿಡುವ ಆಕ್ಷೇಪಣೆಯ ಮೇರೆಗೆ ಕಾಮಗಾರಿಯನ್ನು ಸ್ಥಗಿತಗೊಳಿಸಲಾಯಿತು. ಅಲ್ಲಿಯವರೆಗೆ 4 ಸ್ಪ್ಯಾನ್‌ಗಳುಳ್ಳ ಪ್ರತಿಯೊಂದು 16.50 ಮೀಟರ್‌ನಂತೆ ಡೆಕ್‌ಸ್ಲ್ಯಾಬ್ ನಿರ್ಮಾಣ, ಎರಡು ಪೈಲಾನ್‌ಗಳು ಹಾಗೂ 136 ಮೀಟರ್ ಉದ್ದದ ತೂಗುಸೇತುವೆ ಸ್ಲ್ಯಾಬ್ ಪೂರ್ಣಗೊಳಿಸಲಾಗಿತ್ತು. ಮಧ್ಯದ 24 ಮೀಟರ್ ಉದ್ದದ ತೂಗುಸೇತುವೆ ಸ್ಲ್ಯಾಬ್ ಮಾತ್ರ ಬಾಕಿ ಉಳಿದಿರುತ್ತದೆ. ದಿನಾಂಕ 14.6.2000 ದಿಂದ ಕಾಮಗಾರಿಯನ್ನು ಪೂರ್ಣವಾಗಿ ಸ್ಥಗಿತಗೊಳಿಸಲಾಯಿತು.

ದಿನಾಂಕ: 11-5-2003 ರ ಯುನೆಸ್ಕೋ ಮಷಿನ್‌ರವರು ಸೇತುವೆಯ ಪರಿವೀಕ್ಷಣೆ ಮಾಡಿ ಕೆಲವು ನಿಬಂಧನೆಗಳನ್ನು ವಿಧಿಸಿ ಬಾಕಿ ಉಳಿದ ಕಾಮಗಾರಿಯನ್ನು ಪೂರೈಸಲು ಸೂಚಿಸಿದ ಅನ್ವಯ ಕೆಳಕಂಡಂತೆ ವಾರ್ಪಾಟಿನೊಂದಿಗೆ ಉಳಿದ ಕಾಮಗಾರಿಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಯಿತು.

ನಿಬಂಧನೆಗಳು :-

1. ಶ್ರೀ ಹೆಚ್.ಡಿ.ಕಮ್ಮೀಯರ್, ಉಪನ್ಯಾಸಕರು, ಯುನೆಸ್ಕೋ ಇವರ ಸೂಚನೆ ಮೇರೆಗೆ ಬೈಪಾಸ್ ರಸ್ತೆಯನ್ನು ನಿರ್ಮಿಸುವುದು.
2. ಲಘುವಾಹನಗಳನ್ನು ಮಾತ್ರ ಸಂಚರಿಸಲು ಎತ್ತರ ತಡೆ ಕಂಬಳನ್ನು ನಿರ್ಮಿಸುವುದು

3. ಪುರಾತತ್ವ ಶಿಲ್ಪಕಲೆಗೆ ಸರಿಯಾಗುವಂತೆ ಸೇತುವೆಯನ್ನು ಅಂತಿಮ ರೂಪಗೊಳಿಸುವುದು ದಿನಾಂಕ14-7-2007ರಂದು ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ, ಕೇಂದ್ರ ಸರ್ಕಾರ ಇವರು ಸೇತುವೆಯ ಬಾಕಿ ಉಳಿದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು. ದಿನಾಂಕ 19.7.2007ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೂ ಸಹ ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು. ಈ ಹಿನ್ನೆಲೆಯಲ್ಲಿ ದಿನಾಂಕ:6.8.2007ರಂದು ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರಿಂದ ಮಾನ್ಯ ಮುಖ್ಯ ಇಂಜಿನಿಯರ್‌ರವರು, ಉತ್ತರ ಧಾರವಾಡ ಇವರಿಗೆ ಸದರಿ ಬಾಕಿ ಕಾಮಗಾರಿಯ ಹಾಗೂ ಯುನೆಸ್ಕೋರವರ ನಿಬಂಧನೆಯಂತೆ ಟೆಂಡರ್ ಕರೆಯಲು ಸೂಚನೆ ನೀಡಿದರು. ದಿನಾಂಕ:14.12.2007ರಂದು ಟರ್ನ್‌ಕೀ ಟೆಂಡರ್ ಸ್ವೀಕರಿಸಿ ತಾಂತ್ರಿಕ ಬಿಡ್‌ಅನ್ನು ಉನ್ನತ ಅಧಿಕಾರಿಗಳಿಗೆ ಅನುಮೋದನೆ ಗಾಗಿ ಸಲ್ಲಿಸಲಾಯಿತು. ಸರ್ಕಾರದಿಂದ ದಿನಾಂಕ:6.10.2008ರಂದು ಸದರಿ ಕಾಮಗಾರಿಯ ಟೆಂಡರನ್ನು ಶ್ರೀ ಬಿ.ವಿ.ರೆಡ್ಡಿ ಮತ್ತು ಕಂಪನಿ, ಹೈದರಾಬಾದ್ ಇವರಿಗೆ ರೂ.662.40 ಲಕ್ಷಗಳಿಗೆ ಪೂರೈಸಿಕೊಡಲು ಟರ್ನ್‌ಕೀ ಆಧಾರದಂತೆ ದಿನಾಂಕ 15-12-2008 ರಂದು ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ಕೊಡಲಾಗಿದೆ.

'ಟರ್ನ್‌ಕೀ' ಆಧಾರದ ಮೇಲೆ ಸದರಿ ಕಾಮಗಾರಿಗೆ ಬೇಕಾದ ವಿನ್ಯಾಸವನ್ನು ಸಂಬಂಧಪಟ್ಟ ವಿನ್ಯಾಸ ತಜ್ಞರಿಂದ ಪಡೆದು ಹಗೂ ತಜ್ಞರ ಸೂಚನೆಯಂತೆ ಕಾಮಗಾರಿಯನ್ನು ಪೂರೈಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಸದರಿ ಗುತ್ತಿಗೆದಾರರು ದಿನಾಂಕ 15.12.2008ರಿಂದ ಬಾಕಿ ಉಳಿದ ಕಾಮಗಾರಿಯನ್ನು ಪೂರೈಸಲು ಕ್ರಮ ತೆಗೆದುಕೊಂಡಿದ್ದಾರೆ. ಸದರಿ ಕಾಮಗಾರಿಗೆ ಮೊದಲಿನಿಂದ ವಿನ್ಯಾಸ ತಜ್ಞರಾದ ಶ್ರೀರಾಮಕುಮಾರರಾಜು ಹೈದ್ರಾಬಾದ್ ಇವರು ಉಳಿದ 24.00 ಮೀಟರ್ ಸ್ಲ್ಯಾಬ್ ಕ್ಯಾಸ್ಟ್ ಮಾಡಲು ಸೆಂಟರಿಂಗ್ ವಿನ್ಯಾಸದ ನಕ್ಷೆಗಳನ್ನು ನೀಡಿರುತ್ತಾರೆ. ಅದರಂತೆ ಗುತ್ತಿಗೆದಾರರು ಸೆಂಟರಿಂಗ್ ಕಾಮಗಾರಿ ಮಾಡಿ ಸದರಿ ವಿನ್ಯಾಸ ನೀಡಿದ ತಜ್ಞರಿಂದ ದಿನಾಂಕ : 18-01-2009 ರಂದು ಪರಿವೀಕ್ಷಣೆ ಮಾಡಿಸಿ, 6.00 ಮೀಟರ್ ಉದ್ದಕ್ಕೆ ಸ್ಲ್ಯಾಬ್‌ಕ್ಯಾಸ್ಟ್ ಮಾಡಲು ಸೂಚಿಸಿದ್ದರು. ದಿನಾಂಕ: 21-01-2009ರಂದು 6.00ಮೀಟರ್ ಉದ್ದಕ್ಕೆ ಸ್ಲ್ಯಾಬ್ ಕ್ಯಾಸ್ಟ್ ಮಾಡಲಾಯಿತು. ದಿನಾಂಕ: 22-01-2009ರಂದು ಕರ್ಬ ಕಾಂಕ್ರೀಟ್ ಹಾಕಲು ಮುಂದಾದಾಗ ಮಧ್ಯಾಹ್ನ 2.45 ಗಂಟೆಗೆ ತಳವಾರುಘಟ್ಟ ಸೇತುವೆ ಕಡೆಯ ಪೈಲಾನ ಮುರಿದು ಬಿದ್ದುದರಿಂದ ತೂಗು

ಸೇತುವೆಯ ಪೂರ್ಣ ಭಾಗವು ನದಿಯಲ್ಲಿ ಕುಸಿದು ಬಿದ್ದಿದೆ. ಹಾಗೂ ಆನೆಗೊಂದೆ ಭಾಗದ ಪೈಲಾನ್ ಕೂಡಾ ವಾಲಿರುತ್ತದೆ.

ಈ ಘಟನೆಯ ತನಿಖೆಯನ್ನು ಸ್ವಾಯತ್ತತೆ ಹೊಂದಿದ ಡಾ॥ ವಿಶ್ವನಾಥ ಅವರ ನೇತೃತ್ವದ ಹಾಗು ಹಿರಿಯ ಇಂಜಿನಿಯರ್ ತಜ್ಞರುಗಳನ್ನು ಒಳಗೊಂಡ ಟಾಸ್ಕ್‌ಫೋರ್ಸ್‌ಗೆ ವಹಿಸಲಾಗುವುದು. ಹಾಗು ನಿಗದಿತ ಅವಧಿಯಲ್ಲಿ ವರದಿ ಸಲ್ಲಿಸಲು ಸೂಚಿಸಲಾಗುವುದು.

ಈ ಘಟನೆ ನಡೆದ ಸಂದರ್ಭದಲ್ಲಿ ಕಾಮಗಾರಿಯಲ್ಲಿ ನಿರತರಾಗಿದ್ದ ಸುಮಾರು 35-40 ಮಂದಿ ಕಾರ್ಮಿಕರಲ್ಲಿ 35 ಜನರನ್ನು ರಕ್ಷಿಸಿ ವಿವಿಧ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ. ರಕ್ಷಣೆಯ ಕಾರ್ಯ ಪೂರ್ಣ ಪ್ರಮಾಣದಲ್ಲಿ ಸಾಗುತ್ತಿದ್ದು ನುರಿತ ಈಜುಗಾರರನ್ನು ಈ ಕಾರ್ಯಕ್ಕೆ ಬಳಸಲಾಗುತ್ತಿದೆ. ಇದರಲ್ಲಿ ಸುಮಾರು 33 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿತ್ತು. ಉಳಿದಂತೆ ಇಬ್ಬರಲ್ಲಿ ಒಬ್ಬರಿಗೆ ತಲೆಗೆ ಪೆಟ್ಟಾಗಿದೆ ಮತ್ತೊಬ್ಬರಿಗೆ ಕಾಲು ಮುರಿದಂತಾಗಿದೆ. ಅವರಲ್ಲಿ ಒಬ್ಬರನ್ನು ಬಳ್ಳಾರಿಯ ವಿಮ್ಸ್‌ಗೆ ಮತ್ತೊಬ್ಬರನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲೆ ಮಾಡಲಾಗಿದೆ. ಅವರಿಗೆ ಯಾವುದೇ ಪ್ರಾಣಾಪಾಯವಿಲ್ಲವೆಂದು ವೈದ್ಯರು ತಿಳಿಸಿದ್ದಾರೆ. ಅದಲ್ಲದೆ ಕಾರವಾರದಿಂದ ಮತ್ತು ಮಂಗಳೂರಿನಿಂದ ನುರಿತ ಈಜುಗಾರರನ್ನು ಕರೆಸಿ ಉಳಿದಂಥ ವ್ಯಕ್ತಿಗಳಿಗಾಗಿ ಅನ್ವೇಷಣೆ ನಡೆಯುತ್ತಿದೆ. ಇದುವರೆಗೆ ಕಾಣೆಯಾದ ಬಗ್ಗೆ ಯಾವುದೇ ವರದಿಯಾಗಿಲ್ಲ. ಈ ಸೇತುವೆ ಇದ್ದ ಸ್ಥಳದಲ್ಲಿ 120 ರಿಂದ 180 ಅಡಿ ನೀರಿನ ಆಳ ಇದೆಯೆಂಬ ಮಾಹಿತಿ ಇದೆಯೆಂದು ಸಭೆಗೆ ತಿಳಿಸುತ್ತಿದ್ದೇನೆ.

ಶ್ರೀ ಎ. ಮಂಜು :- ಅಲ್ಲಿ ಎಷ್ಟು ಜನ ಸತ್ತಿದ್ದಾರೆಂದು ಹೇಳಲಿಲ್ಲ.

ಶ್ರೀ ಜೆ. ಕರುಣಾಕರರೆಡ್ಡಿ :- ಸತ್ತಿದ್ದರೆ ತಾನೆ ಹೇಳುವುದು. 35 ಮಂದಿ ಏನು ಪತ್ತೆಯಾಗಿದ್ದಾರೆ ಅದರಲ್ಲಿ 33 ಜನರಿಗೆ ಸಣ್ಣಪುಟ್ಟ ಗಾಯವಾಗಿದೆ. ಇನ್ನು ಇಬ್ಬರಿಗೆ ಗಾಯವಾಗಿದೆ. ಸತ್ತಿರುವ ಬಗ್ಗೆ ವರದಿ ಇಲ್ಲ.

ಶ್ರೀ ಎ. ಮಂಜು :- ಪತ್ರಿಕೆಗಳಲ್ಲಿ ಸತ್ತಿರುವ ಬಗ್ಗೆ ಬಂದಿದೆಯಲ್ಲಾ?

ಶ್ರೀ ಜೆ. ಕರುಣಾಕರರೆಡ್ಡಿ :- ಪತ್ರಿಕೆಯನ್ನು ಹೇಗೆ ನಂಬುವುದು. ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ. ಯಾರೇ ಒಬ್ಬರು ಸತ್ತಿರುವ ಬಗ್ಗೆ ವರದಿ ಇಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಅಲ್ಲಿ ಎಷ್ಟು ಜನರು ಕಾಣೆಯಾಗಿದ್ದಾರೆ?

ಶ್ರೀ ಜಿ. ಕರುಣಾಕರರೆಡ್ಡಿ :- 5 ಜನರು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಅವರನ್ನು ಸತ್ತಿದ್ದಾರೆಂದು ಸಹ ಭಾವಿಸಬಹುದಲ್ಲ? ಈ ಘಟನೆಯ ಬಗ್ಗೆ ಏನು ತನಿಖೆ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ. ಕೇವಲ ಒಂದು ಟಾಸ್ಕ್‌ಫೋರ್ಸ್ ನಿಂದ ವಿಚಾರಣೆ ಮಾಡಿಸುವುದಷ್ಟೆ ಸೂಕ್ತವೇ? ಅಥವಾ ನಿಮ್ಮ ಇಲಾಖೆಯಲ್ಲಿ ಯಾವ ಇಲಾಖೆಯವರು ಟೆಂಡರ್ ಕರೆದಿದ್ದರು, ನಿಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು, ಅಥವಾ ಪರಿಣಿತರಿಂದ ಇದನ್ನು ತನಿಖೆಗೆ ಒಳಪಡಿಸಿದ್ದೀರೊ? ಈ ಸೇತುವೆ ಕುಸಿತ ವಾಗಬೇಕಾದರೆ ಆ ಗುತ್ತಿಗೆದಾರರು ಎಷ್ಟರ ಮಟ್ಟಿಗೆ ಜವಾಬ್ದಾರರಾಗುತ್ತಾರೋ ಅಷ್ಟೇ ಜವಾಬ್ದಾರಿ ಆ ಕೆಲಸವನ್ನು ನಿರ್ವಹಣೆ ಮಾಡುವ ಇಂಜಿನಿಯರ್‌ಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಏಕೆಂದರೆ ಆ ಒಂದು ಸೂಪರ್‌ವಿಜನ್ ಮಾಡುವುದು ಅವರ ಕರ್ತವ್ಯ. ಅವರ ಕರ್ತವ್ಯಲೋಪದಿಂದ ಸಹ ಈ ಸೇತುವೆ ಬಿದ್ದಿದೆಯೆಂದು ನಾವು ಅಂದುಕೊಳ್ಳಬಹುದು. ಆದ್ದರಿಂದ ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಕಾರ್ಯಪಾಲಕ ಅಭಿಯಂತರರನ್ನು ಅಮಾನತ್ತು ಮಾಡಿದ್ದೀರಾ? ಮುಖ್ಯ ಅಭಿಯಂತರನ್ನು ಅಮಾನತ್ತು ಮಾಡಿದ್ದೀರಾ? ಇದನ್ನು ನಿರ್ವಾಹಣೆ ಮಾಡುತ್ತಿದ್ದವರು ಯಾರು? ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಜಿ. ಕರುಣಾಕರರೆಡ್ಡಿ :- ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಸಚಿವರು ಆ ಸ್ಥಳಕ್ಕೆ ಭೇಟಿ ನೀಡಲು ಹೋಗಿದ್ದಾರೆ. ಅವರು ಅಲ್ಲಿಂದ ಬಂದ ಕೂಡಲು ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನ ಮಾಡುತ್ತೇವೆ. ಸರ್ಕಾರವಂತು ಯಾವುದೇ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ. ಯಾರೇ ತಪ್ಪಿತಸ್ಥರಿರಲಿ ಅದು ಗುತ್ತಿಗೆದಾರರಿರಲಿ, ಇಂಜಿನಿಯರ್ ಇರಲಿ ಇನ್ನೊಬ್ಬರು ಇರಲಿ, ತಾಂತ್ರಿಕವಾಗಿ ಪರಿಶೀಲನೆ ಮಾಡಿ ಯಾರೆ ವ್ಯಕ್ತಿಗಳು ಅಧಿಕಾರಿಗಳು ಇರಲಿ ಖಂಡಿತ ಅವರ ಮೇಲೆ ಕ್ರಮಕೈಗೊಳ್ಳುತ್ತೇವೆ.